# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/H/G-431/2021**

**ಆದೇಶ ದಿನಾಂಕ: 15/02/2022**

ಶೇಷಮಾಲ್ ಜೆ. ಜೈನ್,
ಮೆ. ಧನಲಕ್ಷ್ಮಿ ಎಂಟರ್ ಪ್ರೈಸಸ್,
ಹಳೆ ಗಬ್ಬರು, ಪಿ.ಬಿ. ರಸ್ತೆ,
ಹುಬ್ಬಳ್ಳಿ.

**ಪ್ರತಿನಿಧಿಸುವವರು:**
ಶ್ರೀ ತುಷಾರ್ ಎಂ ಬದ್ದಿ
ಅರಿಹಂತ ಪಾರ್ಕ್,
ಕೇಶ್ವಾಪುರ,
ಹುಬ್ಬಳ್ಳಿ – 580023. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ–2, ಹೆಸ್ಕಾಂ,
ನ್ಯೂ ಇಂಗ್ಲೀಷ್ ಸ್ಕೂಲ್ ಹಿಂಭಾಗ, ಪಿ.ಬಿ. ರಸ್ತೆ,
ಹುಬ್ಬಳ್ಳಿ – 580020.

**ಪ್ರತಿನಿಧಿಸುವವರು:**
ಶ್ರೀ ಹೆಚ್.ವಿ. ದೇವರಾಜ್, ವಕೀಲರು,
ನಂ. 39, ಶಾಪ್ ನಂ. 24,
ಮೆಜನೇನ್ ಫ್ಲೋರ್,
ಎ.ಎಸ್.ವಿ.ಎನ್.ವಿ. ಭವನ,
ಕೆ.ಜಿ. ರಸ್ತೆ,
ಬೆಂಗಳೂರು-560009.

2. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ,
ಶಿವಗಂಗಾ ಲೇಔಟ್, ಕೇಶ್ವಾಪುರ,
ಹುಬ್ಬಳ್ಳಿ – 560023. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಅಡಿಯಲ್ಲಿ, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿ ನಗರ, 254/2021 ಆದೇಶ ಸಂಖ್ಯೆ: ಅಇಂ(ವಿ)/ ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ–254/2021/CYS-12, ಇವರ ಆದೇಶ ದಿನಾಂಕ 07.04.2021ರ, ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ದೂರುದಾರ/ಅಪೀಲುದಾರರು ವಿದ್ಯುತ್ ಸ್ಥಾವರ ಸಂಖ್ಯೆ RGBRMP2858ರ ನೋಂದಾಯಿತ ವಿದ್ಯುತ್ ಗ್ರಾಹಕರಾಗಿದ್ದು, LT–5 ಜಕಾತಿಯಲ್ಲಿ 26.60 HP ಭಾರಕ್ಕೆ ಮಂಜೂರಾತಿ ಹೊಂದಿದ್ದು ನಂತರ ದಿನಾಂಕ 18.08.2010ರಂದು 5 HP ವಿದ್ಯುತ್ ಭಾರವನ್ನು ಪಡೆದುಕೊಂಡಿರುತ್ತಾರೆ. ಅದರಂತೆ ಒಟ್ಟು ಭಾರವು 31.6 HP ಆಗಿದ್ದು ದಿನಾಂಕ 27.10.2017ರವರೆಗೆ ಇದೇ ವಿದ್ಯುತ್ ಭಾರವನ್ನು ಅಪೀಲುದಾರ ಸ್ಥಾವರ ಸಂಖ್ಯೆ ಹೊಂದಿರುತ್ತದೆ. 2013 ಸಾಲಿನ ಜನವರಿ ತಿಂಗಳಲ್ಲಿ ಅಪೀಲುದಾರರು ತನ್ನ ಇಂಡಸ್ಟ್ರೀಯಲ್ ಯುನಿಟ್ ಅನ್ನು ಶೆಡ್ ನಂ. ಬಿ-88, ಎಮ್.ಟಿ. ಸಾಗರ್, ಇಂಡಸ್ಟ್ರೀಯಲ್ ಎಸ್ಟೇಟ್, ಗೋಕುಲ್ ರೋಡ್, ಹುಬ್ಬಳ್ಳಿ ಇಲ್ಲಿಗೆ ಸ್ಥಳಾಂತರಿಸಿಕೊಂಡಿರುತ್ತಾರೆ. ಈ ರೀತಿ ಇರುವಾಗ್ಯೆ ಒಂದನೇ ಪ್ರತಿವಾದಿಯು ವಿದ್ಯುತ್ ಸ್ಥಾವರ ಸಂಖ್ಯೆ RGBRMP2858ರ ಮಾಪಕವನ್ನು ದಿನಾಂಕ 22.07.2017ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಾಪಕ ತಪಾಸಣ ಉಪವಿಭಾಗ, ಹೆಸ್ಕಾಂ, ಹುಬ್ಬಳ್ಳಿರವರಿಂದ ಪರಿಶೀಲಿಸಿ, ಮಾಪಕ MNR ಇರುವುದಾಗಿ ವರದಿ ನೀಡಿದ ಅನ್ವಯ Regulation

27.04 of the Conditions of Supply of Electricity of Distributions Licensees in the State of Karnataka ಪ್ರಕಾರ ಹಿಂಬಾಕಿ ಮೊತ್ತ ರೂ. 86,854/– ತುಂಬುವಂತೆ ಅಪೀಲುದಾರರಿಗೆ ಒಂದು ಡಿಮ್ಯಾಂಡ್ ನೋಟೀಸನ್ನು (Demand Notice) ನೀಡಿರುತ್ತಾರೆ. ಈ ರೀತಿ ಒಂದನೇ ಪ್ರತಿವಾದಿಯು ನೀಡಿದ ಡಿಮ್ಯಾಂಡ್ ನೋಟೀಸನ್ನು (Demand Notice) Clause 29.03 of the Conditions of Supply of Electricity of Distributions Licensees in the State of Karnataka ಪ್ರಕಾರ ಇಲ್ಲದೇ ಇದ್ದ ಕಾರಣ ಸದರಿ ನೋಟೀಸನ್ನು ಪ್ರಶ್ನಿಸಿ ಎರಡನೇ ಪ್ರತಿವಾದಿಯ ಮುಂದೆ ಅಪೀಲುದಾರರು ಒಂದು ದೂರನ್ನು ಸಲ್ಲಿಸಿರುತ್ತಾರೆ. ಆದರೇ ಎರಡನೇ ಎದುರುದಾರರು ದೂರಿನ ಅಂಶಗಳು ಹಾಗೂ Clause 29.03 of the Conditions of Supply of Electricity of Distributions Licensees in the State of Karnatakaರಲ್ಲಿ ಹೇಳಲಾದ ನಿಯಮಗಳನ್ನು ಒಂದನೇ ಎದುರುದಾರರು ಪಾಲಿಸಿರುವುದಿಲ್ಲ ಎಂದು ಕಂಡು ಬಂದಿದ್ದರೂ ಕೂಡ ಒಂದನೇ ಎದುರುದಾರರು ಹಿಂಬಾಕಿ ಮೊತ್ತವನ್ನು ಪಾವತಿ ಮಾಡುವಂತೆ ಮಾಡಿದ ಆದೇಶವನ್ನು ಎತ್ತಿ ಹಿಡಿದಿರುತ್ತಾರೆ. ಆದ ಕಾರಣ ಸದರಿ ಆದೇಶದಿಂದ ನೊಂದು ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಪೀಲನ್ನು ಸಲ್ಲಿಸಲಾಗಿರುತ್ತದೆ.

## ಕಾರಣಗಳು

2) ಒಂದನೇ ಎದುರುದಾರರು ಫೆಬ್ರುವರಿ 2013ರಿಂದ ಜುಲೈ 2017ರವರೆಗೆ ಅಪೀಲುದಾರರ ಸ್ಥಾವರವು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿತ್ತು ಎಂಬುದನ್ನು ಪರಿಶೀಲಿಸಿರುವುದಿಲ್ಲ.

3) ಅಪೀಲುದಾರರು ದಿನಾಂಕ 12.04.2013ರಂದು ಕಮರ್ಶಿಯಲ್ ಅಧಿಕಾರಿ (Commercial Officer) BSNL ಹುಬ್ಬಳ್ಳಿರವರಿಗೆ ತಮ್ಮ ಸ್ಥಾವರವನ್ನು ನ್ಯೂ ಗಬ್ಬುರ್, ಪಿ.ಬಿ. ರಸ್ತೆ, ಹುಬ್ಬಳ್ಳಿ ಇಲ್ಲಿಂದ ಶೆಡ್ ನಂ. ಬಿ–88 ಎಂ.ಟಿ. ಸಾಗರ್, ಇಂಡಸ್ಟ್ರೀಯಲ್ ಎಸ್ಟೇಟ್, ಗೋಕುಲ್ ರೋಡ್, ಹುಬ್ಬಳ್ಳಿ ಇಲ್ಲಿಗೆ ಸ್ಥಳಾಂತರಗೊಳಿಸಿದ ಬಗ್ಗೆ ಟೆಲಿಫೋನ್ ಸಂಖ್ಯೆಯನ್ನು ಸ್ಥಳಾಂತರ ಮಾಡಿಸಿಕೊಡುವಂತೆ ಕೋರಿ ಕೊಟ್ಟ ಪತ್ರವನ್ನು ಎರಡನೇ ಎದುರುದಾರರು ಪರಿಶೀಲಿಸಿರುವುದಿಲ್ಲ.

4) ಅಪೀಲುದಾರರು ಸಲ್ಲಿಸಿದ ದಿನಾಂಕ 15.03.2017 FORM VAT-7 VALUE ADDED TAX REGISTRATION CERTIFICATE ನಲ್ಲಿದ್ದ ಹಳೇ ವಿಳಾಸವನ್ನು ಮತ್ತು ದಿನಾಂಕ 25.09.2014 ರಂದು ಅಪೀಲುದಾರರು ಹಾಜರು ಪಡಿಸಿದ ಶೆಡ್ ನಂ. ಬಿ-88, ಎಮ್.ಟಿ. ಸಾಗರ್, ಇಂಡಸ್ಟ್ರೀಯಲ್ ಎಸ್ಟೇಟ್, ಗೋಕುಲ್ ರೋಡ್, ಹುಬ್ಬಳ್ಳಿ ಇಲ್ಲಿ ತಮ್ಮ ಧನಲಕ್ಷ್ಮಿ ಎಂಟರ್ ಪ್ರೈಸಸ್ ಎಂಬ ಫರ್ಮನ್ನು ನಡೆಸುತ್ತಿರುವ ಬಗ್ಗೆ (VAT-7 VALUE ADDED TAX REGISTRATION CERTIFICATE) ಹಾಜರುಪಡಿಸಿದ್ದು ಎರಡನೇ ಪ್ರತಿವಾದಿಯು ಈ ಎರಡೂ ಪ್ರಮಾಣ ಪತ್ರಗಳಲ್ಲಿ ಇರುವಂತಹ ವಹಿವಾಟು ಬೇರೆ ಬೇರೆ ಅಲ್ಲವೆಂದೂ, ಹಾಗೂ ಈ ಎರಡೂ ಒಂದೇ ಆಗಿದ್ದು ಅಪೀಲುದಾರರಿಗೆ ಸೇರಿದ್ದು ಎಂಬ ಅಂಶವನ್ನು ಎರಡನೇ ಪ್ರತಿವಾದಿಯು ಪರಿಗಣಿಸಿರುವುದಿಲ್ಲ.

5) ಅಪೀಲುದಾರರು ಸಲ್ಲಿಸಿದ ಶೆಡ್ ನಂ. ಬಿ-88ರ ಸ್ವತ್ತಿನ ಮಾಲಿಕರು ಬರೆದು ಕೊಟ್ಟ ಬಾಡಿಗೆ ಕರಾರು ಪತ್ರವನ್ನು ಎರಡನೇ ಪ್ರತಿವಾದಿಯು ಪರಿಶೀಲಿಸಿರುವುದಿಲ್ಲ.

6) ಮೀಟರ್ ಸ್ಥಾವರ ಸಂಖ್ಯೆ MP1850 ಮೊದಲಿಗೆ 50 HP ವಿದ್ಯುತ್ ಭಾರವನ್ನು ಹೊಂದಿದ್ದು ಬಾಡಿಗೆ ಕರಾರು ಪತ್ರವಾದ ನಂತರ ದಿನಾಂಕ 28.01.2013ರಂದು 65 HP ವಿದ್ಯುತ್ ಭಾರ ಹೊಂದಿದ್ದನ್ನು ಸಹ ಎರಡನೇ ಪ್ರತಿವಾದಿ ಪರಿಗಣಿಸಿರುವುದಿಲ್ಲ.

7) ಅಪೀಲುದಾರರು ದಿನಾಂಕ 18.07.2017 ಸೆಕ್ಷನ್ ಅಧಿಕಾರಿ, ಯುನಿಟ್–3, ಸಿಎಸ್‌ಡಿ–2, ಹುಬ್ಬಳ್ಳಿ ಇವರಿಗೆ ಮೀಟರ್ ಬದಲಾವಣೆ ಮಾಡಿಕೊಡುವಂತೆ ಕೋರಿದ್ದನ್ನು ಅದರಂತೆ ದಿನಾಂಕ 22.07.2017ರಂದು LTMR ಸಿಬ್ಬಂದಿಯಿಂದ ಮೀಟರ್ ಬದಲಾವಣೆ ಮಾಡಿಕೊಟ್ಟಿದ್ದನ್ನು ಎರಡನೇ ಎದುರುದಾರರು ಪರಿಗಣಿಸಿರುವುದಿಲ್ಲ. ಕೆಲಸಗಾರರ ಕೊರತೆಯಿಂದ ಅಪೀಲುದಾರರು ತಮ್ಮ ಸ್ಥಾವರಕ್ಕೆ ನೀಡಿದ 31.6 HP ವಿದ್ಯುತ್ ಭಾರದಲ್ಲಿ 5 HP ವಿದ್ಯುತ್ ಭಾರವನ್ನು ಕಡಿತಗೊಳಿಸಲು ಕೋರಿದ್ದು ಅದರಂತೆ ದಿನಾಂಕ 27.10.2017ರಂದು ವಿದ್ಯುತ್ ಭಾರ ಕಡಿಮೆ ಮಾಡಿದ ಬಗ್ಗೆ ಮಾಡಿದ ಆದೇಶವನ್ನು ಪರಿಗಣಿಸಿರುವುದಿಲ್ಲ.

8) ಎರಡನೇ ಪ್ರತಿವಾದಿಯು 27.07.2017ರಂದು ಅಪೀಲುದಾರರ ವಿದ್ಯುತ್ ಸ್ಥಾವರದ ಭಾರವನ್ನು 5 HP ಭಾರಕ್ಕೆ ಕಡಿತಗೊಳಿಸಿದ್ದು ಅದರಂತೆ IR 1.5 ಹೊಸ ಮೀಟರನ್ನು ಅಳವಡಿಸಿದ್ದು, ಇದರ ಪ್ರಕಾರ ಅಂದಿನ ಮಾಪಕ 866 ಆಗಿದ್ದು MTMR ವರದಿ ದಿನಾಂಕ 28.10.2017ರ ಪ್ರಕಾರ ಅಂತಿಮ ಮಾಪವು 00769 ಆಗಿತ್ತೆಂದು ಅದರಂತೆಯೇ ಲೆಕ್ಕಾಚಾರ ಮಾಡಿ 31.6 HPಗೆ ಬಿಲ್ಲನ್ನು ಹಾಕಿರುತ್ತಾರೆ ಎಂಬುದನ್ನು ಎರಡನೇ ಪ್ರತಿವಾದಿ ಪರಿಗಣಿಸಿರುವುದಿಲ್ಲ. Clause 27 of the Conditions of Supply of Electricity of Distributions Licensees in the State of Karnataka ಪ್ರಕಾರ ಹಾಗೂ ವಿದ್ಯುತ್ ಕಾಯ್ದೆ 1910,

ಕಲಂ 26(6) ಪ್ರಕಾರ ಮಾಪಕದಲ್ಲಿ ಯಾಂತ್ರಿಕ ದೋಷ ಕಂಡು ಬಂದಿದ್ದರೇ ಅಥವಾ ಮಾಪಕವು ಸುಟ್ಟು ಹೊಗಿದ್ದರೇ, ಅಂತಹ ಸಂದರ್ಭಗಳಲ್ಲಿ, Electrical Inspectorate ರವರಿಂದ ಹಿಂಬಾಕಿ ಮೊತ್ತವನ್ನು ಪರಿಶೀಲನೆ ಮಾಡಬೇಕಾಗಿತ್ತೆಂದು ಆದರೆ ಆ ರೀತಿ ಮಾಡಿಲ್ಲವೆಂದು ಈ ಎಲ್ಲಾ ಕಾರಣಗಳಿಂದ ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತೇವೆಂದು, ಆದ್ದರಿಂದ ತಮ್ಮ ಅಪೀಲನ್ನು ಪುರಸ್ಕರಿಸಲು ಹಾಗೂ ಎರಡನೇ ಪ್ರತಿವಾದಿಯು ಮಾಡಿದ ಆದೇಶವನ್ನು ತೆರವುಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

9) ಈ ಪ್ರಾಧಿಕಾರದಿಂದ ಪ್ರತಿವಾದಿಗಳಿಗೆ ನೋಟಿಸ್ ನೀಡಲಾಗಿರುತ್ತದೆ. ಒಂದನೇ ಪ್ರತಿವಾದಿಯು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುತ್ತಾರೆ ಮತ್ತು ಲಿಖಿತ ತಕರಾರು ಸಲ್ಲಿಸಿರುತ್ತಾರೆ.

10) ಸದರಿ ತಕರಾರಿನ ಪ್ರಕಾರ ವಿದ್ಯುತ್ ಸ್ಥಾವರ ಸಂಖ್ಯೆ RGBRMP2858ರ ನೋಂದಾಯಿತ ಗ್ರಾಹಕರು ಅಪೀಲುದಾರರು ಆಗಿರುತ್ತಾರೆಂದು, LT-5 ಜಕಾತಿಯಲ್ಲಿ 26.60 HP ಭಾರಕ್ಕೆ ಮಂಜೂರಾತಿ ಹೊಂದಿರುತ್ತಾರೆಂದು, ನಂತರ ದಿನಾಂಕ 19.08.2010ರಂದು 5 HP ಹೆಚ್ಚುವರಿ ವಿದ್ಯುತ್ ಭಾರವನ್ನು ಪಡೆದುಕೊಂಡಿರುತ್ತಾರೆಂದು ಹಾಗೂ ದಿನಾಂಕ 23.10.2017ರಂದು 31.60 HP ವಿದ್ಯುತ್ ಭಾರದಿಂದ 5 HPಗೆ ವಿದ್ಯುತ್ ಭಾರಕ್ಕೆ ಕಡಿಮೆ ಮಾಡಿಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಅಪೀಲುದಾರ ವಿದ್ಯುತ್ ಸ್ಥಾವರವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಮಾಪಕ ತಪಾಸಣಾ ಉಪವಿಭಾಗ ಹೆಸ್ಕಾಂ, ಹುಬ್ಬಳ್ಳಿರವರು, ದಿನಾಂಕ 22.07.2017ರಂದು ಪರಿಶೀಲಿಸಿ ಮಾಪಕ MNR ಇರುವುದಾಗಿ ವರದಿ ನೀಡಿ ಹಿಂಬಾಕಿ ಮೊತ್ತ ರೂ. 86,854/-ಗಳನ್ನು

ತುಂಬುವಂತೆ ಗ್ರಾಹಕರಿಗೆ ದಿನಾಂಕ 18.08.2017ರಂದು ತಿಳಿಸಿದ್ದರೆಂದು ಈ ಬಗ್ಗೆ ಗ್ರಾಹಕರಿಗೆ Clause 29.03 of the Conditions of Supply of Electricity of Distributions Licensees in the State of Karnataka ಪ್ರಕಾರ ದಿನಾಂಕ 18.08.2017, 23.09.2017 ಹಾಗೂ 07.11.2017ರಂದು ನೋಟೀಸುಗಳನ್ನು ನೀಡಲಾಗಿತ್ತೆಂದು ಆದರೇ ಅವರು ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ, ಎಂದು ಆದ್ದರಿಂದ MNR ಅವಧಿಯ ವ್ಯತ್ಯಾಸದ ಬಿಲ್ಲು ರೂ. 86,854/- ಆಗಿರುತ್ತದೆಂದು ಇದನ್ನು ಪಾವತಿ ಮಾಡಲು ಬೇಡಿಕೆ ಇಡಲಾಗಿತ್ತೆಂದು, ಅಪೀಲುದಾರರ ಪರ ಅವರ ಪ್ರತಿನಿಧಿಯು ಈ ಬೇಡಿಕೆಯನ್ನು ಪ್ರಶ್ನಿಸಿ ಮರು ವಿಚಾರಣೆ ಕೈಗೊಳ್ಳುವಂತೆ ಉಪವಿಭಾಗಕ್ಕೆ ನಿರ್ದೇಶನ ಕೊಡುವಂತೆ ಕೋರಿಕೊಂಡ ಕಾರಣ ದಿನಾಂಕ 27.08.2018ರಂದು ಅಧೀಕ್ಷಕ ಇಂಜಿನಿಯರ್ (ವಿ)ರವರು ಮರು ವಿಚಾರಣೆ ಕೈಗೊಳ್ಳಲು ನಿರ್ದೇಶನ ನೀಡಿದ್ದರೆಂದೂ, ಅದರಂತೆ ಗ್ರಾಹಕರಿಗೆ ಮತ್ತೊಂದು ಅವಕಾಶವನ್ನು ಆಕ್ಷೇಪಣೆ ಸಲ್ಲಿಸಲು ನೀಡಿ ದಿನಾಂಕ 26.10.2018ರಂದು ಮರುವಿಚಾರಣೆ ಕೈಗೊಳ್ಳಲಾಗಿರುತ್ತದೆಂದು ನುಡಿದಿರುತ್ತಾರೆ.

11) ಮತ್ತೆ ಮುಂದುವರೆದು ಮಾಪಕ ತಪಾಸಣಾ ಉಪವಿಭಾಗದವರು ದೋಷಪೂರಿತ ಮಾಪಕವನ್ನು ಹೆಸ್ಕಾಂ ಮಾಪಕ ತಪಾಸಣಾ ಲ್ಯಾಬೋರೇಟರಿನಲ್ಲಿ ಪರಿಶೀಲಿಸಿ ಮಾಪಕದ ರಿಪೋರ್ಟ್ ಡೌನ್‌ಲೋಡ್ (Report Download) ಆಗದೇ ಇರುವುದಾಗಿ ಹಾಗೂ ಮಾಪಕವು ಸಂಪೂರ್ಣವಾಗಿ ದೋಷ ಹೊಂದಿರುವುದನ್ನು ತಿಳಿಸಿ ದಿನಾಂಕ 24.11.2018ರಂದು ವರದಿಯನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ.

12) ಮತ್ತೆ ಮುಂದುವರೆದು ಒಂದನೇ ಪ್ರತಿವಾದಿಯು ದಿನಾಂಕ 22.07.2017ರಂದು ದೋಷಪೂರಿತ ಮಾಪಕವನ್ನು ಉತ್ತಮ ಮಾಪಕದೊಂದಿಗೆ ಬದಲಾಯಿಸಿದ್ದು ನಂತರ 15.09.2017ರಂದು ಮಾಪಕದಲ್ಲಿ 765 ಯುನಿಟ್ಟುಗಳು ವಿದ್ಯುತ್ ಬಳಕೆ ಆಗಿತ್ತೆಂದು ಮಾಪಕ್ಕೆ 50/5 ಅನುಪಾತದ ಸಿಟಿ ಇದ್ದುದ್ದರಿಂದ ಮಾಪಕ ಗುಣಾಂಕ ಕೆ=10 ಎಂದು ಪರಿಗಣಿಸಿ ಲೆಕ್ಕಾಚಾರ ಮಾಡಲಾಗಿ ಒಟ್ಟು 53 ದಿವಸದ ಬಳಕೆ 7650 ಯುನಿಟ್ಟುಗಳು ಆಗಿರುವುದರಿಂದ ಸ್ಥಾವರವನ್ನು ಉಪಯೋಗಿಸದೇ ಇರುವುದಾಗಿ ಹೇಳಿರುವುದು ಸಮಂಜಸವಾಗಿರುವುದಿಲ್ಲವೆಂದು ಹಾಗೂ 53 ದಿನಗಳಿಗೆ 7650 ಯುನಿಟ್‌ಗಳು ದಾಖಲಾಗಿರುವುದನ್ನು ಕಂಡಾಗ ದಿನಾಂಕ 15.03.2015ರಿಂದ 22.07.2017ರವರೆಗೆ ವಿದ್ಯುತ್ ಬಳಕೆ ದಾಖಲಾಗದ ಕಾರಣ ಕಂಪನಿಗೆ ಆರ್ಥಿಕ ನಷ್ಟ ಉಂಟಾಗಿರುತ್ತದೆ ಎಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಮತ್ತೆ ಮುಂದುವರೆದು ಕಸ್ಟಮರ್ ಹಿಸ್ಟರಿಯ ಪ್ರಕಾರ ಫೆಬ್ರುವರಿ 2013ರಿಂದ ಜುಲೈ 2017ರವರೆಗೆ ಸ್ಥಾವರವು Idle ಆಗಿ ಇತ್ತು ಎಂಬುದು ಹೇಳಿರುವುದು ಸುಳ್ಳೆಂದು, ಸತ್ಯಕ್ಕೆ ದೂರವೆಂದು ಅಷ್ಟೇ ಅಲ್ಲದೇ ದೂರವಾಣಿ ಸಂಪರ್ಕವನ್ನು ಬದಲಿ ವಿಳಾಸಕ್ಕೆ ವರ್ಗಾಹಿಸಲು ಗ್ರಾಹಕರು BSNLರವರಿಗೆ ನೀಡಿದ ಪತ್ರವಾಗಲಿ ಅಥವಾ ವ್ಯಾಟ್ ನೋಂದಣಿ ದೃಢೀಕರಣ ಪತ್ರದಲ್ಲಿ ಧನಲಕ್ಷ್ಮಿ ಎಂಟರ್‌ಪ್ರೈಸಸ್‌ನ ವ್ಯವಹಾರಿಕ ವಿಳಾಸ ಬದಲಾವಣೆ ಆಗಿರುವುದಾಗಲೀ ಸದರಿ ಸ್ಥಾವರವು ಬಳಕೆಯಲ್ಲಿ ಇರಲಿಲ್ಲ ಎಂಬುದನ್ನು ಧೃಢೀಕರಿಸಿರುವುದಿಲ್ಲವೆಂದು ಹಾಗೂ ಮಾಪಕ ಬದಲಾವಣೆ ಆದ ಮೇಲೆ ಬಳಕೆ ದಾಖಲಾಗಿರುವುದನ್ನು ಪರಿಶೀಲಿಸಿದಾಗ ಸ್ಥಾವರವು ಬಳಕೆಯಲ್ಲಿತ್ತು ಎಂಬುದು ಕಂಡು ಬರುತ್ತದೆ ಎಂದು ಈ ಎಲ್ಲಾ ಕಾರಣಗಳಿಂದ ಅಪೀಲುದಾರರಿಗೆ ನೀಡಿರುವ ಹಿಂಬಾಕಿಯು ಯಾವುದೇ

ದಂಡದ ಮೊತ್ತವಾಗಿರದೇ ಮಾಪಕವು ದೋಷಪೂರಿತವಾಗಿದ್ದು ಬಳಕೆ ದಾಖಲಾಗದೇ ಬಿಟ್ಟು ಹೋಗಿದ್ದರಿಂದ ಮತ್ತು ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಆಗಿರುವುದರಿಂದ ಕೆಇಆರ್‌ಸಿ ನಿಯಮಾವಳಿ ಕಂಡಿಕೆ 29.03ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತವನ್ನು ಗ್ರಾಹಕರು ತುಂಬಲು ಬಾಧ್ಯಸ್ತರಾಗಿರುತ್ತಾರೆಂದು ಆದ್ದರಿಂದ ಎರಡನೇ ಪ್ರತಿವಾದಿಯು ಮಾಡಿದ ಆದೇಶವು ಸೂಕ್ತವಾಗಿದ್ದು ಸದರಿ ಆದೇಶವನ್ನು ಎತ್ತಿ ಹಿಡಿಯಬೇಕೆಂದು ಹಾಗೂ ಅಪೀಲನ್ನು ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

13) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ತಕರಾರಿನ ಅಂಶಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಅದರಂತೆ ಅಪೀಲುದಾರರ ಪರ ಅಧಿಕೃತ ಪ್ರತಿನಿಧಿಯವರು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ. ಅದೇ ರೀತಿ ಒಂದನೇ ಪ್ರತಿವಾದಿ ಸಹ ಖುದ್ದು ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಪರ ವಾದವನ್ನು ಮಂಡಿಸಿರುತ್ತಾರೆ ಹಾಗೂ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ.

14) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರಿಶೀಲನೆಯನ್ನು ಮಾಡಿರುತ್ತೇನೆ.

15) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ: -

i. ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಹುಬ್ಬಳ್ಳಿ ರವರು ದಿನಾಂಕ 07.04.2021 ಪ್ರಕರಣ ಸಂಖ್ಯೆ: CGRF 254/2021, ಆದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಹಿಸ-

1/ಗ್ರಾಕುಂಕೊನಿವೇ/ಕಡತ-254/2021/CYS-12 ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

ii. ಏನು ಆದೇಶ?

16) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

i. **ಅಂಶ (i)** – ನಕಾರಾತ್ಮಕವಾಗಿ

ii. **ಅಂಶ (ii)** – ಕಡೆಯ ಆದೇಶದಂತೆ

## ಕಾರಣಗಳು

17) **ಅಂಶ (i):** ವಾದವಿವಾದದ ಸಮಯದಲ್ಲಿ ಅಪೀಲುದಾರರ ಪ್ರತಿನಿಧಿಯವರು ಈ ಪ್ರಾಧಿಕಾರದ ಮುಂದೆ ಹಾಜರಿದ್ದು ತಮ್ಮ ವಾದವನ್ನು ಮಂಡಿಸುತ್ತಾ ವಿದ್ಯುತ್ ಸ್ಥಾವರ ಸಂಖ್ಯೆ RGBRMP2858 ಇದರ ನೋಂದಾಯಿತ ವಿದ್ಯುತ್ ಗ್ರಾಹಕರು, ದೂರುದಾರರು/ಅಪೀಲುದಾರರು ಆಗಿರುತ್ತಾರೆಂದೂ, LT-5 ಜಕಾತಿಯಲ್ಲಿ 26.06 HP ಭಾರಕ್ಕೆ ಮಂಜೂರಾತಿಯನ್ನು ಪಡೆದುಕೊಂಡಿದ್ದರೆಂದು, ಅದಾದ ಮೇಲೆ ದಿನಾಂಕ 18.08.2010ರಂದು 5 HP ವಿದ್ಯುತ್ ಭಾರವನ್ನು ಮತ್ತೆ ಪಡೆದುಕೊಂಡಿರುತ್ತಾರೆಂದೂ ಅಂದರೆ ಒಟ್ಟು ಭಾರವು 31.6 HP ಆಗಿರುತ್ತದೆಂದು ನುಡಿದಿರುತ್ತಾರೆ.

18) ಮತ್ತೆ ಮುಂದುವರೆದು ದಿನಾಂಕ 27.10.2017ರವರೆಗೆ ಇದೇ ವಿದ್ಯುತ್ ಭಾರದೊಂದಿಗೆ ಅಪೀಲುದಾರ ಸ್ಥಾವರ ಸಂಖ್ಯೆ RGBRMP2858 ಇರುತ್ತದೆಂದು ಆದರೆ ಅಪೀಲುದಾರರು 2013ನೇ ಇಸವಿ ಜನವರಿ ತಿಂಗಳಲ್ಲಿ

ತಮ್ಮ ಇಂಡಸ್ಟ್ರಿಯಲ್ ಯೂನಿಟ್ ಅನ್ನು ಶೆಡ್ ನಂಬರ್ B-88, ಎಂ ಟಿ ಸಾಗರ್ ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ್ ರೋಡ್, ಹುಬ್ಬಳ್ಳಿ ಇಲ್ಲಿಗೆ ಸ್ಥಳಾಂತರಗೊಳಿಸಿಕೊಂಡಿರುತ್ತಾರೆಂದು, ಈ ರೀತಿ ಇದ್ದರೂ ಸಹಾ ದಿನಾಂಕ 22.07.2010ರಂದು ಒಂದನೇ ಪ್ರತಿವಾದಿಯು ವಿದ್ಯುತ್ ಸ್ಥಾವರ ಸಂಖ್ಯೆ RGBRMP2858 ಮಾಪಕವನ್ನು ಪರಿಶೀಲನೆ ಮಾಡಿ ಆ ಸಮಯದಲ್ಲಿ ಮಾಪಕವು MNR ಇರುವುದಾಗಿ ವರದಿ ನೀಡಿ ಅದರ ಪ್ರಕಾರ ಹಿಂಬಾಕಿ ಮೊತ್ತ ರೂ. 86,854/- ರೂಪಾಯಿಗಳನ್ನು ತುಂಬುವಂತೆ ಅಪೀಲುದಾರರಿಗೆ ಡಿಮಾಂಡ್ ನೋಟೀಸನ್ನು ನೀಡಿರುವುದಾಗಿ ನುಡಿದಿರುತ್ತಾರೆ. ಆದರೆ, ಸದರಿ ನೋಟೀಸ್ Clause 29.03 of the Conditions of Supply of Electricity of Distributions Licensees in the State of Karnataka ಪ್ರಕಾರ ಇಲ್ಲದೇ ಇದ್ದಕಾರಣ ಅದನ್ನು ಪ್ರಶ್ನಿಸಿ 2ನೇ ಪ್ರತಿವಾದಿಯ/ಸಿಜಿಆರ್‌ಎಫ್ ಮುಂದೆ ದೂರನ್ನು ಸಲ್ಲಿಸಲಾಗಿತ್ತೆಂದು, ಆದರೆ 2ನೇ ಪ್ರತಿವಾದಿಯವರೂ ಸಹ ದೂರಿನ ಅಂಶಗಳನ್ನು ಪರಿಶೀಸಿಲ್ಲವೆಂದೂ ಹಾಗೂ Clause 29.03 of the Conditions of Supply of Electricity of Distributions Licensees in the State of Karnatakaರಲ್ಲಿ ಹೇಳಲಾದ ಅಂಶಗಳನ್ನಾಗಲೀ ಪಾಲನೆ ಮಾಡಿಲ್ಲವೆಂದು, ಈ ರೀತಿ ಸರಿಯಾಗಿ ಪರಿಶೀಲನೆ ಮಾಡದೇ ಹಿಂಬಾಕಿ ಮೊತ್ತವನ್ನು ಪಾವತಿ ಮಾಡುವಂತೆ ಆದೇಶಿಸಿರುತ್ತಾರೆಂದು, ಇದರಿಂದ ಅಪೀಲುದಾರರಿಗೆ ಅನ್ಯಾಯವಾಗಿರುತ್ತದೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಫೆಬ್ರುವರಿ 2013ರಿಂದ ಜುಲೈ 2017ರವರೆಗೆ RGBRMP2858 ಸ್ಥಾವರವು ಕಾರ್ಯನಿರ್ವಹಿಸದೇ ಸ್ಥಗಿತಗೊಂಡಿತ್ತು ಎಂಬುದನ್ನು ಒಂದನೇ ಎದುರುದಾರರು ಪರಿಶೀಲಿಸಿಲ್ಲವೆಂದು, ಅದೇ ರೀತಿ ಎರಡನೇ ಎದುರುದಾರರೂ ಸಹ ಈ ಅಂಶವನ್ನು ಪರಿಗಣಿಸಿಲ್ಲವೆಂದು ನುಡಿದಿರುತ್ತಾರೆ.

19) ಮತ್ತೆ ಮುಂದುವರೆದು ತಮ್ಮ ವಾದವನ್ನು ಮಂಡಿಸುತ್ತಾ ದಿನಾಂಕ 12.04.2013ರಂದು ಅಪೀಲುದಾರರು ತಮ್ಮ ಸ್ಥಾವರವನ್ನು ಶೆಡ್ ನಂ. B-88ಕ್ಕೆ ಸ್ಥಳಾಂತರಗೊಳಿಸಿದ ಮೇರೆಗೆ ಟೆಲಿಫೋನ್ ಸಂಖ್ಯೆಯನ್ನು ಕೂಡ ಸ್ಥಳಾಂತರ ಮಾಡಿಸಿಕೊಡುವಂತೆ ಕೋರಿ ಒಂದು ಪತ್ರವನ್ನು BSNL ಅಧಿಕಾರಿಗಳಿಗೆ ಕೊಟ್ಟಿದ್ದರೆಂದು, ಅದೇ ಪತ್ರದ ನಕಲನ್ನು ಎರಡನೇ ಎದುರುದಾರರ ಮುಂದೆ ಹಾಜರುಪಡಿಸಿದ್ದರೆಂದು, ಆದರೇ ಎರಡನೇ ಎದುರುದಾರರು ಸಹ ಸದರಿ ಪತ್ರವನ್ನು ಪರಿಗಣಿಸಿಲ್ಲವೆಂದು, ಅಷ್ಟೇ ಅಲ್ಲದೇ 15.03.2017 ಹಾಗೂ 25.09.2014ರ ದಿನಾಂಕಗಳ FORM-VAT-7 ದಾಖಲೆಗಳ ನಕಲುಗಳನ್ನು ಎರಡನೇ ಎದುರುದಾರರ ಮುಂದೆ ಹಾಜರು ಪಡಿಸಿದ್ದರೆಂದು, ಇದನ್ನು ಕೂಡ ಎರಡನೇ ಎದುರುದಾರರು ಆದೇಶ ಹೊರಡಿಸುವ ಸಮಯದಲ್ಲಿ ಪರಿಗಣನೆಗೆ ತೆಗೆದುಕೊಂಡಿಲ್ಲವೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಶೆಡ್ ನಂ. B-88ರ ಮಾಲೀಕರು ಬರೆದುಕೊಟ್ಟ ಬಾಡಿಗೆ ಕರಾರು ಪತ್ರವನ್ನು ಸಹ ಎರಡನೇ ಪ್ರತಿವಾದಿಯವರ ಮುಂದೆ ಅಪೀಲುದಾರರು ಸಲ್ಲಿಸಿದ್ದಾರೆಂದು, ಆದರೆ ಇದನ್ನು ಕೂಡ 2ನೇ ಪ್ರತಿವಾದಿಯವರು ಪ್ರಶ್ನಿತ ಆದೇಶ ಮಾಡಿದ ಸಂದರ್ಭದಲ್ಲಿ ಪರಿಶೀಲಿಸಿಲ್ಲವೆಂದು ನುಡಿದಿರುತ್ತಾರೆ.

20) ಮತ್ತೆ ಮುಂದುವರೆದು ಮೀಟರ್ ಸ್ಥಾವರ ಸಂಖ್ಯೆ MP1850 ಮೊದಲಿಗೆ 50 HP ವಿದ್ಯುತ್ ಭಾರವನ್ನು ಹೊಂದಿತ್ತೆಂದು ಬಾಡಿಗೆ ಕರಾರು ಪತ್ರವಾದ ನಂತರ ಅಂದರೆ, ದಿನಾಂಕ 28.01.2013 ರಂದು 65 HP ವಿದ್ಯುತ್ ಭಾರವನ್ನು ಹೊಂದಿತ್ತು ಎಂಬುದನ್ನು ಸಹ ಪ್ರಶ್ನಿತ ಆದೇಶ ಮಾಡುವ ಸಮಯದಲ್ಲಿ ಎರಡನೇ ಪ್ರತಿವಾದಿಯವರು ಪರಿಗಣಿಸಿಲ್ಲವೆಂದು ದಿನಾಂಕ 18.07.2017ರಂದು ಮೀಟರ್ ಬದಲಾವಣೆ ಮಾಡಿಕೊಡುವಂತೆ ಅಪೀಲುದಾರರು ಕೋರಿದ್ದರೆಂದು, ಅದರಂತೆ ದಿನಾಂಕ 22.7.2017ರಂದು

LTMR ಸಿಬ್ಬಂದಿಯವರಿಂದ ಮೀಟರ್ ಬದಲಾವಣೆ ಆಗಿರುತ್ತದೆಂದು, ಆದರೆ ಈ ಯಾವುದೇ ಅಂಶಗಳನ್ನು ಎರಡನೇ ಎದುರುದಾರರು ಪರಿಗಣಿಸದೇ ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತಾರೆಂದು, ಆದಕಾರಣ ಸದರಿ ಆದೇಶದಿಂದ ನೊಂದು ಪ್ರಸ್ತುತ ಅಪೀಲನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ.

21) ಅರ್ಜಿದಾರರ ಪ್ರತಿನಿಧಿಯವರು ತಮ್ಮ ವಾದಕ್ಕೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ: -

a) ಪ್ರಕರಣ ಸಂಖ್ಯೆ 254/2021ನಲ್ಲಿ ನೀಡಿದ ಆದೇಶದ ನಕಲು.

b) ದಿನಾಂಕ 29.03.2021ರಂದು ಶ್ರೀಮತಿ ಪ್ರೀತಿ AEE (Ele), ರವರು ನೀಡಿದ ಹೇಳಿಕೆ ನಕಲು (Annexure-A).

c) RR No. RGBRMP2858ಕ್ಕೆ ಸಂಬಂಧಪಟ್ಟ ದಿನಾಂಕ 28.10.2017ರ (Annexure-B) ರೇಟಿಂಗ್ ವರದಿಯ ನಕಲು.

d) 23.10.2017ರಂದು ಹೆಸ್ಕಾಂ ರವರು ನೀಡಿದ OM (Official Memorandum) ನ ನಕಲು (Annexure-C).

e) ದಿನಾಂಕ 18.08.2017ರ MNR ನೋಟೀಸ್‌ನ ನಕಲು (Annexure-D).

f) RR No. RGBRMP2858ಕ್ಕೆ ಸಂಬಂಧಪಟ್ಟ ದಿನಾಂಕ 22.07.2017ರ (Annexure-E) ರೇಟಿಂಗ್ ವರದಿಯ ನಕಲು.

g) ದಿನಾಂಕ 18.07.2017ರಂದು ಅರ್ಜಿದಾರರು RR No. RGBRMP2858ಕ್ಕೆ ಸಂಬಂಧಿಸಿದಂತೆ ನೀಡಿದ ಅರ್ಜಿಯ ನಕಲು (Annexure-F).

h) ದಿನಾಂಕ 15.03.2012 (Annexure-G) FORM-VAT-7ನ ನಕಲು.

i) ಅರ್ಜಿದಾರರು BSNL ರವರಿಗೆ ನೀಡಿದ ಅರ್ಜಿಯ ನಕಲು (Annexure-H).

j) ದಿನಾಂಕ 28.01.2013ರಂದು AEE (Ele)ರವರು ನೀಡಿದ ಮತ್ತೊಂದು ಅಧಿಕೃತ ಜ್ಞಾಪನ ಪತ್ರದ ನಕಲು (Annexure-I).

k) ಬಾಡಿಗೆ ಕರಾರು ಪತ್ರದ ನಕಲು (Annexure-J).

l) ದಿನಾಂಕ 12.10.2012ರಲ್ಲಿ ಹೊರಡಿಸಲಾದ ಅಧಿಕೃತ ಜ್ಞಾಪನ ಪತ್ರದ ನಕಲು (Annexure-K).

m) ದಿನಾಂಕ 25.09.2014ರ (Annexure-L) FORM-VAT-7ನ ನಕಲು.

n) 05.05.2011ರ ರೇಟಿಂಗ್ ವರದಿಯ ನಕಲು.

ಇವುಗಳನ್ನು ಹಾಜರ್ ಪಡಿಸಿ ಅಂತಿಮವಾಗಿ ಅಪೀಲಿನಲ್ಲಿ ಕೋರಿದಂತೆ ಆದೇಶ ಮಾಡಲು ಪ್ರಾರ್ಥನೆ ಮಾಡಿರುತ್ತಾರೆ.

22) ಎದುರುದಾರರು ತಮ್ಮ ವಾದವನ್ನು ಮಂಡಿಸುತ್ತಾ ವಿದ್ಯುತ್ ಸ್ಥಾವರ ಸಂಖ್ಯೆ RGBRMP2858 ಇದರ ನೋಂದಾಯಿತ ವಿದ್ಯುತ್ ಗ್ರಾಹಕರು ಅರ್ಜಿದಾರರಾಗಿರುತ್ತಾರೆಂದು, ಇದಕ್ಕೆ LT-5 ಜಕಾತಿಯಲ್ಲಿ 26.60 HP ಭಾರಕ್ಕೆ ಮಂಜೂರಾತಿ ನೀಡಲಾಗಿತ್ತೆಂದು ತದನಂತರ 18.08.2010ರಂದು 5 HP ಹೆಚ್ಚುವರಿ ವಿದ್ಯುತ್ ಭಾರವನ್ನು ಪಡೆದುಕೊಂಡಿರುತ್ತಾರೆಂದು, ತದನಂತರ ದಿನಾಂಕ 23.10.2017ರಂದು 31.60 HPಯಿಂದ 5 HPಗೆ ವಿದ್ಯುತ್ ಭಾರವನ್ನು ಕಡಿಮೆಮಾಡಿಕೊಂಡಿರುತ್ತಾರೆಂದು, ನಂತರ ದಿನಾಂಕ 31.12.2020ರಂದು 25 HP ಹೆಚ್ಚುವರಿ ವಿದ್ಯುತ್ ಭಾರವನ್ನು ಪಡೆದುಕೊಂಡಿರುತ್ತಾರೆಂದು ಅಂದರೆ ಒಟ್ಟು 30 HP ವಿದ್ಯುತ್ ಭಾರವನ್ನು ಪಡೆದಿದ್ದು ಅದಕ್ಕಾಗಿಯೇ ಬಿಲ್ ನೀಡಲಾಗುತ್ತಿದೆ ಎಂದು ನುಡಿದಿರುತ್ತಾರೆ.

23) ಮತ್ತೆ ಮುಂದುವರೆದು ದಿನಾಂಕ 22.07.2017ರಂದು ಹುಬ್ಬಳ್ಳಿಯ ಮಾಪಕ ತಪಾಸಣಾ ಉಪ-ವಿಭಾಗೀಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಅರ್ಜಿದಾರರ ಮಾಪಕವನ್ನು ಪರಿಶೀಲನೆಗೆ

ಒಳಪಡಿಸಿದ್ದರೆಂದು ಆ ಸಮಯದಲ್ಲಿ ಇವರ ಮಾಪಕವು MNR ಇರುವುದಾಗಿ ವರದಿ ನೀಡಿದ್ದರೆಂದು, ಈ ವರದಿಗೆ ಅನುಗುಣವಾಗಿ ಅರ್ಜಿದಾರರಿಗೆ 86,854/- ರೂಪಾಯಿಗಳಷ್ಟು ಹಿಂಬಾಕಿ ಮೊತ್ತವನ್ನು ತುಂಬುವಂತೆ 18.08.2017 ರಂದು ನೋಟೀಸ್ ನೀಡಲಾಗಿತ್ತೆಂದು, ಅದಾದ ಮೇಲೆ 23.09.2017 ರಂದು ನಂತರ 07.11.2017ರಂದು ನೋಟೀಸ್‌ಗಳನ್ನು ಕೊಡಲಾಗಿತ್ತೆಂದು ಇಷ್ಟಾಗಿದ್ದರೂ ಕೂಡ ಅರ್ಜಿದಾರರು ಮೇಲ್ಕಂಡ ನೋಟಿಸುಗಳಿಗೆ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲವೆಂದು, ಆದರೆ ಗ್ರಾಹಕರ ಪರವಾಗಿ ಅವರ ಪ್ರತಿನಿಧಿಯವರು ರೂ. 86,854/- ಮೊತ್ತದ ಬೇಡಿಕೆ ಆಕರಿಸಿರುವುದನ್ನು ಪ್ರಶ್ನಿಸಿ ಮರುವಿಚಾರಣೆ ಕೈಗೊಳ್ಳುವಂತೆ ದಿನಾಂಕ 27.11.2017ರಂದು ಅಧೀಕ್ಷಕ ಇಂಜಿನಿಯರ್ ರವರಿಗೆ ಮನವಿ ಮಾಡಿಕೊಂಡಿದ್ದರೆಂದು ಇವರ ಮನವಿಯನ್ನು ಪುರಸ್ಕರಿಸಿ ಅಧೀಕ್ಷಕ ಇಂಜಿನಿಯರ್ (ವಿ)ರವರು ಮರುವಿಚಾರಣೆ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರೆಂದು, ಆದಕಾರಣ ಗ್ರಾಹಕರಿಗೆ ತಮ್ಮ ಆಕ್ಷೇಪಣೆ ಸಲ್ಲಿಸಲು ಮತ್ತೊಂದು ಅವಕಾಶವನ್ನು ಕೊಟ್ಟು ದಿನಾಂಕ 26.10.2018ರಂದು ಮರು ವಿಚಾರಣೆಯನ್ನು ಕೈಗೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

24) ಮತ್ತೆ ಮುಂದುವರೆದು ತಮ್ಮ ವಾದದಲ್ಲಿ ಒಂದನೇ ಎದುರುದಾರ ಮಾಪಕ ತಪಾಸಣಾ ಉಪವಿಭಾಗದವರು ದೋಷಪೂರಿತ ಮಾಪಕವನ್ನು ಹೆಸ್ಕಾಂ ಮಾಪಕ ತಪಾಸಣಾ ಲ್ಯಾಬರೇಟರಿಯಲ್ಲಿ ಪರಿಶೀಲನೆ ಮಾಡಿ ಆ ಸಮಯದಲ್ಲಿ ಮಾಪಕದ ರಿಪೋರ್ಟ್ ಡೌನ್ ಲೋಡ್ ಆಗದೇ ಇರುವುದಾಗಿ ಹಾಗೂ ಮಾಪಕವು ಸಂಪೂರ್ಣವಾಗಿ ಫಾಲ್ಟಿ ಇರುವುದಾಗಿ ನಮೂದಿಸಿ 24.11.2018ರಂದು ಒಂದು ವರದಿಯನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ. ಮತ್ತೆ ಮುಂದುವರಿದು ಈ ರೀತಿಯ ದೋಷಪೂರಿತ ಮಾಪಕವನ್ನು ದಿನಾಂಕ

22.07.2017ರಂದು ಉತ್ತಮ ಮಾಪಕದೊಂದಿಗೆ ಬದಲಾಯಿಸಿದ್ದು ಇದಾದ ಮೇಲೆ ದಿನಾಂಕ 15.09.2017ರಂದು ಮಾಪಕದಲ್ಲಿ 765 ಯೂನಿಟ್‌ಗಳಷ್ಟು ವಿದ್ಯುತ್ ಬಳಕೆಯಾಗಿದ್ದು ಮಾಪಕಕ್ಕೆ 50/5 ಅನುಪಾತದ CT ಇದ್ದಕಾರಣ ಇದರ ಗುಣಾಂಕವನ್ನು K=10 ಎಂಬುದಾಗಿ ಪರಿಗಣಿಸಿ ಲೆಕ್ಕಾಚಾರ ಮಾಡಿ ಒಟ್ಟು 53 ದಿನಗಳ ಬಳಕೆ 7650 ಯೂನಿಟ್‌ಗಳು ಆಗಿದ್ದುದ್ದರಿಂದ ಸ್ಥಾವರವನ್ನು ಗ್ರಾಹಕರು ಉಪಯೋಗಿಸದೇ ಇರುವುದಾಗಿ ಹೇಳಿರುವುದು ಸಮಂಜಸವಾಗಿಲ್ಲವೆಂದು, ಆದ್ದರಿಂದ ದಿನಾಂಕ 15.03.2013ರಿಂದ 22.07.2017ರವರೆಗೆ ವಿದ್ಯುತ್ ಬಳಕೆ ದಾಖಲಾಗದಿರುವುದರಿಂದ ಕಂಪನಿಗೆ ಆರ್ಥಿಕ ನಷ್ಟ ಆಗಿದೆ ಎಂದು ನುಡಿದಿರುತ್ತಾರೆ. ಮತ್ತೆ ಮುಂದುವರಿದು ಗ್ರಾಹಕರು ನುಡಿದಿರುವಂತೆ ಕಸ್ಟಮರ್ ಹಿಸ್ಟರಿ ಪ್ರಕಾರ ಫೆಬ್ರುವರಿ 2013ರಿಂದ ಜುಲೈ 2017ರವರೆಗೆ ವಿದ್ಯುತ್ ಸ್ಥಾವರವು ಐಡೆಲ್ (Idle) ಆಗಿ ಇದೆ ಎಂಬುದಾಗಿ ಹೇಳಿರುವುದು ಸತ್ಯಕ್ಕೆ ದೂರವಾಗಿರುತ್ತದೆ ಎಂದು ನುಡಿದಿರುತ್ತಾರೆ.

25) ಮತ್ತೆ ಮುಂದುವರೆದು ಗ್ರಾಹಕರ ಪ್ರತಿನಿಧಿಯವರು ತಮ್ಮ ವಾದದಲ್ಲಿ ಮಂಡಿಸಿರುವಂತೆ ದೂರವಾಣಿ ಸಂಪರ್ಕವನ್ನು ಬದಲಿ ವಿಳಾಸಕ್ಕೆ ವರ್ಗಾವಣೆ ಮಾಡಲು ನೀಡಿದಂತಹ ಅರ್ಜಿಯ ನಕಲಿನ ಆಧಾರದ ಮೇರೆಗೆ ಸ್ಥಾವರದ ಬಳಕೆ ಆಗಿಲ್ಲ ಎಂಬುದಾಗಿ ಧೃಢೀಕರಿಸಲು ಸಾಧ್ಯವಿಲ್ಲವೆಂದೂ, ಅದೇ ರೀತಿ VAT ನೋಂದಣಿ ಧೃಢೀಕರಣ ಪತ್ರದಲ್ಲಿ "ಧನಲಕ್ಷ್ಮೀ ಎಂಟರ್ ಪ್ರೈಸಸ್"ನ ವ್ಯವಹಾರಿಕ ವಿಳಾಸ ಬದಲಾವಣೆ ಆಗಿರುವ ಆಧಾರದ ಮೇಲೆಯೂ ಸಹ ಗ್ರಾಹಕರ ವಿದ್ಯುತ್ ಸ್ಥಾವರವು ಬಳಕೆ ಆಗಿಲ್ಲ ಎಂಬುದಾಗಿ ನಿರ್ಧರಿಸಲು ಸಾಧ್ಯವಿಲ್ಲವೆಂದು ಅದಕ್ಕಾಗಿ ಗ್ರಾಹಕರು ರೂ. 86,854/-ಗಳ ಹಿಂಬಾಕಿ ಮೊತ್ತವನ್ನು ಪಾವತಿ ಮಾಡಬೇಕಾಗುತ್ತದೆಂದು ನುಡಿದಿರುತ್ತಾರೆ.

26) ಸದರಿಯವರು ತಮ್ಮ ವಾದಕ್ಕೆ ಪೂರಕವಾಗಿ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತಾರೆ: -

I. ದಿನಾಂಕ 18.08.2017ರಂದು ನೀಡಲಾದ MNR ನೋಟೀಸು ಹಾಗೂ 22.07.2017, 28.07.2017ರ ರೇಟಿಂಗ್ ವರದಿಗಳ ದೃಢೀಕೃತ ನಕಲುಗಳು (Annexure-A).

II. ದಿನಾಂಕ 07.11.2017ರ ಅಂತಿಮ ಸೂಚನಾ Level-3 ದಾಖಲೆಯ ದೃಢೀಕೃತ ನಕಲು (Annexure-B)

III. ದಿನಾಂಕ 23.09.2017ರ ಅಂತಿಮ ಸೂಚನಾ Level-3 ದಾಖಲೆಯ ದೃಢೀಕೃತ ನಕಲು.

IV. ದಿನಾಂಕ 27.08.2018ರ ಹೆಸ್ಕಾಂ ರವರು AEE (Ele), ರವರಿಗೆ ಬರೆದ ಪತ್ರದ ದೃಢೀಕೃತ ನಕಲು (Annexure -C).

V. ದಿನಾಂಕ 24.11.2018ರ RR No. RGBRMP2858ಕ್ಕೆ ಸಂಬಂಧಪಟ್ಟ ಡೌನ್‌ಲೋಡೆಡ್ ಡೇಟಾ ವರದಿಯ ದೃಢೀಕೃತ ನಕಲು (Annexure-D)

VI. ಮತ್ತೊಂದು ಡೌನ್‌ಲೋಡೆಡ್ ಡೇಟಾದ ದೃಢೀಕೃತ ನಕಲು (Annexure-E).

VII. ಕಸ್ಟಮರ್ ಹಿಸ್ಟರಿ ಸ್ಟೇಟ್‌ಮೆಂಟ್ನ ದೃಢೀಕೃತ ನಕಲು (Annexure-F).

VIII. ದಿನಾಂಕ 17.07.2020 ರಂದು ಮೌಲ್ಯಮಾಪನ ಅಧಿಕಾರಿಗಳು ನೀಡಿದ ಆದೇಶದ ದೃಢೀಕೃತ ನಕಲು (Annexure-G).

IX. ಪ್ರಕರಣ ಸಂಖ್ಯೆ. 254/21ರ ಆದೇಶದ ದೃಢೀಕೃತ ನಕಲು (Annexure-H).

X. ದಿನಾಂಕ 25.10.2021ರಂದು ಹೆಸ್ಕಾಂ ರವರು RR No. MP1850ಕ್ಕೆ ಸಂಬಂಧಪಟ್ಟಂತೆ AEE(Ele)., ರವರಿಗೆ ಬರೆದ ಪತ್ರದ ದೃಢೀಕೃತ ನಕಲು (Annexure-I).

XI. ದಿನಾಂಕ 17.10.2017ರ RR No. RGBRMP2858ಕ್ಕೆ ಸಂಬಂಧಪಟ್ಟ ವಿದ್ಯುತ್ ಗುತ್ತಿಗೆದಾರರ ಮುಕ್ತಾಯ ಮತ್ತು ಸಮಾಪನ ಪರೀಕ್ಷಣಾ ವರದಿಯ ದೃಢೀಕೃತ ನಕಲು.

XII. ದಿನಾಂಕ 23.10.2021ರ RR No. MP1850ರ ಮಾಪಕವು ಶಾಶ್ವತ ನಿಲುಗಡೆ ಹೊಂದಿದ ಬಗ್ಗೆ ದಾಖಲೆಯ ದೃಢೀಕೃತ ನಕಲು.

ಇವುಗಳನ್ನು ಹಾಜರ್ ಪಡಿಸಿ ಅಂತಿಮವಾಗಿ ಅಪೀಲನ್ನು ವಜಾಮಾಡುವಂತೆ ಹಾಗೂ ಎರಡನೇ ಎದುರುದಾರರ ಆದೇಶವನ್ನು ಸ್ಥಿರಗೊಳಿಸುವಂತೆ ಕೋರಿಕೊಂಡಿರುತ್ತಾರೆ.

27) ಮೇಲ್ಕಂಡ ಪ್ರಕರಣದಲ್ಲಿ ಉಭಯಪಕ್ಷಕಾರರು ಮಂಡಿಸಿದ ವಾದವಿವಾದದ ಅಂಶಗಳನ್ನು ಹಾಗೂ ಹಾಜರುಪಡಿಸಿದ ದಾಖಲಾತಿಗಳ ಅಂಶಗಳನ್ನು ಪರಿಶೀಲಿಸಿದಾಗ ಕಂಡುಬರುವುದೇನೆಂದರೆ ಅಪೀಲುದಾರರು ವಿದ್ಯುತ್ ಸ್ಥಾವರ ಸಂಖ್ಯೆ RR No. RGBRMP2858ನ ನೋಂದಾಯಿತ ಗ್ರಾಹಕರಾಗಿದ್ದು LT-5 ಜಕಾತಿಯಲ್ಲಿ ಮೊದಲಿಗೆ 26.60 HP ಭಾರಕ್ಕೆ ಮಂಜೂರಾತಿಯನ್ನು ಪಡೆದು ತದನಂತರ 5HP ಭಾರದ ಮಂಜೂರಾತಿಯನ್ನು ಪಡೆದಿರುತ್ತಾರೆಂದು ಕಂಡುಬರುತ್ತದೆ. ಇದಾದ ನಂತರ 31.60 HP ಭಾರದಿಂದ 5 HP ಭಾರಕ್ಕೆ ಇಳಿಕೆ ಮಾಡಿಕೊಂಡು ಅದಾದ ಮೇಲೆ ಪುನಃ 25 HP ಭಾರವನ್ನು ಪಡೆದಿರುತ್ತಾರೆಂದು. ಅಂದರೆ 30 HP ವಿದ್ಯುತ್ ಭಾರವನ್ನು ಹೊಂದಿರುತ್ತಾರೆ ಎನ್ನುವುದರಲ್ಲಿ ಯಾವುದೇ ವಿವಾದಾಂಶಗಳು ಇರುವದಿಲ್ಲ.

28) ಅಪೀಲುದಾರರ ಪ್ರಮುಖ ವಾದವೇನೆಂದರೆ, ತಮ್ಮ Industrial Unit, ಧನಲಕ್ಷ್ಮಿ ಎಂಟರ್‌ಪ್ರೈಸಸ್‌ನ್ನು ಜನವರಿ 2013ರಲ್ಲಿ New Gabbar, P.B. Road, Hubballi ಯಿಂದ Shed No. B-88, MT Sagar, Industrial Estate, Gokul Road, Hubballiಗೆ ಸ್ಥಳಾಂತರಗೊಳಿಸಿದ್ದರೆಂದು, ಅದ್ದರಿಂದ 2013ರಿಂದ 2017ವರೆಗೆ

RR No. RGBRMP2858 ಸಂಖ್ಯೆಯ ವಿದ್ಯುತ್ ಸ್ಥಾವರವು Idle ಆಗಿದ್ದು ಬಳಕೆ ಆಗಿರುವುದಿಲ್ಲವೆಂದು, ಆದ ಕಾರಣ ದಿನಾಂಕ 22.07.2017ರಂದು ಒಂದನೇ ಪ್ರತಿವಾಧಿ ಕಂಪನಿಯವರು ವಿದ್ಯುತ್ ಸ್ಥಾವರವನ್ನು ಪರಿಶೀಲಿಸಿ MNR ವರದಿ ನೀಡಿ ಅದರಂತೆ ರೂ. 86,854/-ರಷ್ಟು ಹಣವನ್ನು ತುಂಬಲು ಆದೇಶಿಸಿರುವುದು Conditions of Supply of Electricity of Distributions Licensees in the State of Karnatakaನ ನಿಯಮಾವಳಿಗೆ ವಿರುದ್ಧವಾಗಿದೆ ಎಂದಾಗಿರುತ್ತದೆ. ಅಷ್ಟೇ ಅಲ್ಲದೇ ತಾವು ಎರಡನೇ ಪ್ರತಿವಾದಿರವರ ಮುಂದೆ ಹಾಜರುಪಡಿಸಿದ FORM-VAT-7ರ ದಾಖಲೆಗಳನ್ನು ಹಾಗೂ BSNL ಕಛೇರಿಗೆ ನೀಡಿದ ಅರ್ಜಿಯ ನಕಲನ್ನು ಮತ್ತು ಬಾಡಿಗೆ ಕರಾರಿನ ನಕಲುಗಳನ್ನು ಎರಡನೇ ಪ್ರತಿವಾದಿಯು ಪರಿಗಣಿಸದೇ ಆದೇಶಿಸಿರುವುದು ಸಹ Conditions of Supply of Electricity of Distributions Licensees in the State of Karnatakaನ ನಿಯಮಾವಳಿಗೆ ವಿರುದ್ಧವಾಗಿದೆ ಎಂದಾಗಿರುತ್ತದೆ.

29) ಅರ್ಜಿದಾರರು ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ Annexure-A ದಾಖಲಾತಿಯು LTMR, ನಗರ ಉಪವಿಭಾಗ, ಹುಬ್ಬಳ್ಳಿಯ AEE (Ele)ರವರು, ದಿನಾಂಕ 29.03.2021ರಂದು ನೀಡಿದ ಹೇಳಿಕೆಯಾಗಿದ್ದು ಸದರಿ ಹೇಳಿಕೆಯಲ್ಲಿ ದಿನಾಂಕ 22.07.2017ರಂದು ಸ್ಥಾವರ ಸಂಖ್ಯೆ RGBRMP2858 ಸ್ಥಾವರದ 3Ø CT Operated (5A) ಮಾಪಕವು MNR ಆಗಿದ್ದು ಹಾಗೂ ಸದರಿ ಮಾಪಕದ ಬದಲಿಗೆ ಹೊಸ 3Ø CT Operated ಮಾಪಕಕ್ಕೆ ಬದಲಾಯಿಸಿ ಮಾಪನಾಂಕ ಮಾಡಿ ವರದಿ ಸಂಖ್ಯೆ 201ನಲ್ಲಿ ಕಳಚಿದ MNR ಮಾಪಕ ಮತ್ತು ಅಳವಡಿಸಿದ ಹೊಸ ಮಾಪಕದ ವಿವರಗಳನ್ನು ನಮೂದಿಸಿ ಗ್ರಾಹಕರ ಸಹಿ ಪಡೆದು ವರದಿಯನ್ನು ನೀಡಲಾಗಿತ್ತು ಎಂದು, ಮತ್ತೆ ಮುಂದುವರೆದು ದಿನಾಂಕ 28.10.2017ರಂದು AEE (Ele), CSD-2, ಕಾ ಮತ್ತು ಪಾ ಉಪವಿಭಾಗ ಕೋರಿಕೆ

ಪತ್ರದನ್ವಯ ದಿನಾಂಕ 27.10.2017ರಂದು ಸದರಿ ಸ್ಥಾವರದ ಮಂಜೂರಾದ ಭಾರವು 31.6 HPಯಿಂದ 5HPಗೆ ಕಡಿಮೆಗೊಳಿಸಲಾಗಿದ್ದು, ಹಾಲಿ ಇರುವ 3Ø ಉತ್ತಮ CT Operated ಮಾಪಕ ಮತ್ತು 50/5A CTSಗಳನ್ನು ತೆರವುಗೊಳಿಸಿ ಹೊಸ 3Ø Whole ಕರೆಂಟ್ ಮಾಪಕಕ್ಕೆ ಬದಲಾಯಿಸಿ ಮಾಪನಾಂಕ ಮಾಡಿ ವರದಿ ಸಂಖ್ಯೆ 298ರಲ್ಲಿ ಕಳಚಿದ ಮಾಪಕ ಮತ್ತು CT 50/5A ಹಾಗೂ ಅಳವಡಿಸಿದ ಹೊಸ ಮಾಪಕದ ವಿವರಗಳನ್ನು ನಮೂದಿಸಿ ಸದರಿ ವರದಿಯಲ್ಲಿ ಗ್ರಾಹಕರ ಸಹಿ ಪಡೆದು ವರದಿಯನ್ನು ನೀಡಲಾಗಿರುತ್ತದೆ ಎಂಬುದಾಗಿ ನುಡಿದಿರುವುದು ಕಂಡುಬಂದಿರುತ್ತದೆ.

30) Annexure-Bಯನ್ನು ಪರಿಶೀಲನೆ ಮಾಡಿದಾಗ RR No. RGBRMP2858ರ ರೇಟಿಂಗ್ ವರದಿಯಲ್ಲಿ 31.6HP ವಿದ್ಯುತ್ ಭಾರದಿಂದ 5HP ವಿದ್ಯುತ್ ಭಾರಕ್ಕೆ Annexure-Cನಂತೆ ಇರುವ Official Memorandum ಪ್ರಕಾರ ಕಡಿತಗೊಳಿಸಿರುವುದ ಕಂಡುಬರುತ್ತದೆ. ಮತ್ತು ದಿನಾಂಕ 15.01.2018ರಿಂದ ವಿದ್ಯುತ್ ಭಾರದ ಕಡಿತದ ಆದೇಶ ಜಾರಿಗೆ ಬಂದಿರುತ್ತದೆಂದು ಕಂಡುಬರುತ್ತದೆ. Annexure-Dಯನ್ನು ಪರಿಶೀಲನೆ ಮಾಡಿದಾಗ ದಿನಾಂಕ 18.08.2017ರಂದು RGBRMP2858 ಸ್ಥಾವರ ಸಂಖ್ಯೆಯ ಹಿಂದಾಕರಣೆ ಶುಲ್ಕ ರೂ. 86,854/-ಗಳನ್ನು ಪಾವತಿಸಲು ಅರ್ಜಿದಾರರಿಗೆ ನೀಡಿದ MNR ನೋಟಿಸು ಆಗಿರುತ್ತದೆ. ಮತ್ತು ಈ ನೋಟೀಸಿನಲ್ಲಿ ದಿನಾಂಕ 22.07.2017ರಂದು MTR ಹುಬ್ಬಳ್ಳಿರವರು ಅಪೀಲುದಾರರ ವಿದ್ಯುತ್ ಸ್ಥಾವರ ಸಂಖ್ಯೆಯನ್ನು ಪರೀಕ್ಷಿಸಿದಾಗ ಮಾಪಕವು ನಿಂತಿದೆ ಎಂಬುದಾಗಿ ಕಂಡು ಬಂದ ಕಾರಣ Clause 27.04 of the Conditions of Supply of Electricity of Distributions Licensees in the State of Karnatakaನ ಪ್ರಕಾರ ಹಿಂದಾಕರಣೆ ಶುಲ್ಕವನ್ನು ಆಕರಿಸಲಾಗಿದೆ ಎಂದು, MNR ಒಳಗೊಂಡ ತಿಂಗಳುಗಳು ಫೆಬ್ರುವರಿ

2017ರಿಂದ ಜುಲೈ 2017ರವರೆಗಿನ ಅವಧಿಯನ್ನು (ಒಟ್ಟು 6 ತಿಂಗಳು) ಒಳಗೊಂಡಿರುತ್ತದೆಂದು ಕಂಡು ಬಂದಿರುತ್ತದೆ. Annexure-E 22.07.2017ರ ರೇಟಿಂಗ್ ರಿಪೋರ್ಟ್ (Rating Report) ಆಗಿದ್ದು ಸದರಿ ದಿನಾಂಕದಂದು RGBRMP2858 ವಿದ್ಯುತ್ ಮಾಪಕವು ಸುಟ್ಟಿತ್ತು (Burnt) ಎಂಬುದಾಗಿ ಕಂಡು ಬಂದಿದ್ದು ಅದೇ ದಿನ ಹೊಸ ಮೀಟರನ್ನು ಅಡವಳಿಸಿರುವುದು ಸಹ ಕಂಡು ಬಂದಿರುತ್ತದೆ ಮತ್ತು ಸಂಬಂಧಿತ AEE (Ele)ರವರು 'Action required for back billing', faulty recording of meter MNR Burnt' ಎಂಬುದಾಗಿ ಅಭಿಪ್ರಾಯ ಪಟ್ಟಿರುವುದು ಕಂಡುಬರುತ್ತದೆ.

31) Annexure-F ಅನ್ನು ಪರಿಶೀಲಿಸಿದಾಗ ಅಪೀಲುದಾರರು ಹುಬ್ಬಳ್ಳಿ ಸಿಎಸ್‌ಡಿ-II, AEE (Ele) ರವರಿಗೆ ದಿನಾಂಕ 18.07.2017ರಂದು ಪತ್ರವನ್ನು ಬರೆಯುತ್ತಾ RR No. RGBRMP2858 ವಿದ್ಯುತ್ ಮಾಪಕವು ಸುಟ್ಟಿರುವುದರಿಂದ ಹೊಸ ಮಾಪಕವನ್ನು New Gabbar, Hubballi ಯಲ್ಲಿರುವ ಅಪೀಲುದಾರರ ಸ್ಥಾವರಕ್ಕೆ ಅಡವಳಿಸಿ ಕೊಡುವಂತೆ ಕೋರಿರುವುದು ಕಂಡುಬರುತ್ತದೆ. ಅಂದರೇ ಈ ಅರ್ಜಿಯ ಆಧಾರದ ಮೇರೆಗೆ ದಿನಾಂಕ 22.07.2017ರಂದು LTMR AEE (Ele) ರವರು ಅರ್ಜಿದಾರರ ಸ್ಥಳಕ್ಕೆ ಬೇಟಿ ಕೊಟ್ಟು ಪರಿಶೀಲಿಸಿ RR No. RGBRMP2858 ಮಾಪಕವು ಸುಟ್ಟುಹೊಗಿದ್ದನ್ನು ಖಚಿತ ಪಡಿಸಿಕೊಂಡು ಅದರ ಆಧಾರದ ಮೇರೆಗೆ Annexure-Eನಲ್ಲಿ ತೊರಿಸಿದಂತೆ ಕ್ರಮ ಕೈಗೊಂಡಿರುವುದು ಸ್ಪಷ್ಟವಾಗುತ್ತದೆ.

32) ವಾದವಿವಾದದ ಸಮಯದಲ್ಲಿ ಅಪೀಲುದಾರ ಪ್ರತಿನಿದಿಯವರು Conditions of Supply of Electricity of Distributions Licensees in the State of Karnatakaರಲ್ಲಿನ 27.04 ಹಾಗೂ 29.03 ನಿಯಮಾವಳಿಗಳನ್ನು ಎದುರುದಾರ ಕಂಪನಿಯು ಪಾಲಿಸಿಲ್ಲವೆಂದು ನುಡಿದಿರುತ್ತಾರೆ.

33) ನಿಯಮಾವಳಿ 27.04 ಹಾಗೂ 29.03 ಪರಿಶೀಲನೆ ಮಾಡಿದ್ದೇನೆ ಅವುಗಳು ಈ ಕೆಳಗಿನಂತಿರುತ್ತದೆ: -

***"27.04 METER NOT RECORDING***

*i. During the inspection/testing by the Licensee, if the meter is found to be not recording (for any reasons other than tempering) the Consumer shall be billed for a period of not more than six billing months preceding the date for inspection/testing and up to the date of replacement or rectification of the meter on the basis of the average energy consumption of the immediately preceding 3(three) billing months when the meter was recording properly in addition to demand/fixed charges.*

*ii. Notwithstanding the above, where it is established that the meter is out of order only for few days in a billing month, the consumption for such period shall be computed on pro-rata basis of the consumption recorded for the remaining number of days in the billing month.*

*iii. Also, where the recorded consumption is not available fully for three preceding billing months, the available consumption of such lesser period shall be deemed sufficient for computing the consumption, provided consumption of at least one full billing month is clearly established.*

*iv. In case the maximum demand meter of an installation is found to be faulty or not recording properly or not recording at all, the maximum demand shall be billed on the basis of the highest demand recorded in the immediately preceding three billing months during which period maximum demand (MD) meter was recording correctly or 75%*

*of the contract demand whichever is higher. Where, however, the demand entitlement has been got reduced by the Consumer the billing demand shall be restricted to Demand Entitlement.*

*v. In the event of meter going out of order on any day before the first meter reading date after the installation is serviced the revenue demand shall be computed as per the table indicated below subject to the condition that, the consumption for that period being subsequently regulated taking into account the average of twelve months consumption after a working meter is installed."*

*"**29.03 Supplemental claims:** For preferring the supplemental claims, the Licensee shall serve a provisional Assessment order with 15 days' notice to the Consumer to file his objections, if any, against the provisional Assessment order on account of faulty meter or short claims caused due to erroneous billing and obtain his reply. After considering the objections of the Consumer, the Licensee shall issue the final order. The Consumer shall be intimated to make the payment within 15 days of the date of intimation, failing which, the power supply to the installation shall be disconnected and such amount shall be deemed to be arrears of electricity charges. The Licensee shall indicate in the final order, the provisions of K.E.R.C. (Consumer Grievance Redressal Form and Ombudsman) Regulations."*

ಮೇಲಿನ ನಿಯಮಾವಳಿಯ ಪ್ರಕಾರ Faulty Meter ಎಂದು ಕಂಡುಬಂದ 15 ದಿನಗಳಲ್ಲಿ ಗ್ರಾಹಕರಿಗೆ ತಮ್ಮ ಆಕ್ಷೇಪಣೆ ಇದ್ದರೆ ಸಲ್ಲಿಸಲು ಒಂದು ನೋಟೀಸನ್ನು ಕೊಡಬೇಕಾಗುತ್ತದೆ, ಆ ರೀತಿ ಸಲ್ಲಿಸಿದ ಆಕ್ಷೇಪಣೆಯನ್ನು

ಒಂದನೇ ಎದುರುದಾರರು ಪರಿಶೀಲಿಸಿ ತದನಂತರ ಅಂತಿಮ ಆದೇಶವನ್ನು ಹೊರಡಿಸಬೇಕಾಗುತ್ತದೆ.

34) ಪ್ರಸ್ತುತ ಪ್ರಕರಣದಲ್ಲಿ ದಿನಾಂಕ 22.07.2017ರಂದು ಅರ್ಜಿದಾರರ ವಿದ್ಯುತ್ ಸ್ಥಾವರ ಸಂಖ್ಯೆ RGBRMP2858 "ಸುಟ್ಟಿದೆ" ಎಂದು ಕಂಡು ಬಂದ ನಂತರ ಒಂದನೇ ಎದುರುದಾರರು ದಿನಾಂಕ 18.08.2017ರಂದು ಹಾಗೂ 23.09.2017ರಂದು (ಉಲ್ಲೇಖ 2 ಮತ್ತು 3 Annexure-Bನಲ್ಲಿ ಇರುವಂತೆ) ಪತ್ರಗಳ ಮೂಲಕ ಹಿಂಬಾಕಿ ಮೊತ್ತವನ್ನು ಪಾವತಿಸುವ ವಿಚಾರದಲ್ಲಿ ಆಕ್ಷೇಪಣೆ ಇದ್ದರೆ ಸಲ್ಲಿಸಬೇಕೆಂದು ಅಪೀಲುದಾರರಿಗೆ ಸೂಚನೆ ಕೊಟ್ಟಿದ್ದರೂ ಸಹ ಅಪೀಲುದಾರರು ಯಾವುದೇ ಪ್ರತ್ಯುತ್ತರ ಕೊಡದೆ ಇದ್ದ ಕಾರಣ ಅವರ ಕಡೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ ಅಂತಿಮ ಸೂಚನಾ ಪತ್ರಗಳನ್ನು 23.09.2017 ಹಾಗೂ 07.11.2017ರಂದು ನೀಡಿರುವುದು ಕಂಡು ಬರುತ್ತದೆ. ತದನಂತರ ಅಪೀಲುದಾರರು ಹಿಂಬಾಕಿ ಮೊತ್ತವನ್ನು ಪಾವತಿ ಮಾಡದೆ ಹಾಗೂ ಅಂತಿಮ ಸೂಚನಾ ಪತ್ರಗಳಿಗೂ ಆಕ್ಷೇಪಣೆ ಸಲ್ಲಿಸದೇ ಹೋದರೂ ಸಹ, ದಿನಾಂಕ 19.07.2018ರಂದು ಅಪೀಲುದಾರರ ಪ್ರತಿನಿದಿಯವರು ನೀಡಿದ ಮನವಿಯನ್ನು ಪುರಸ್ಕರಿಸಿ ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಇವರು ದಿನಾಂಕ 27.08.2018ರಂದು Conditions of Supply of Electricity of Distributions Licensees in the State of Karnataka ನಿಯಮಾವಳಿ 29.03ರ ಪ್ರಕಾರ ಗ್ರಾಹಕರಿಗೆ ಮತ್ತೊಮ್ಮೆ ಅವಕಾಶ ನೀಡಿ ವಿಚಾರಣೆಯನ್ನು ಕೈಗೊಂಡು ಅಂತಿಮ ಆದೇಶ ಹೊರಡಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಶಹರ ಉಪವಿಭಾಗ-3, ಹೆಸ್ಕಾಂ, ಹುಬ್ಬಳ್ಳಿ, ಇವರಿಗೆ ಆದೇಶ ನೀಡಿರುವುದು

Annexure-C ದಾಖಲೆಯಿಂದ ಕಂಡುಬರುತ್ತದೆ. ಇದರಂತೆ ಒಂದನೇ ಎದುರುದಾರರು ವಿಚಾರಣೆ ಕೈಗೊಂಡು Annexure-G ನಲ್ಲಿ ಇರುವಂತೆ ದಿನಾಂಕ 17.07.2020ರಂದು ಆದೇಶವನ್ನು ಹೊರಡಿಸಿ Conditions of Supply of Electricity of Distributions Licensees in the State of Karnataka ನಿಯಮಾವಳಿ 27.04ರ ಪ್ರಕಾರ ಹಿಂಬಾಕಿ ಮೊತ್ತವನ್ನು ಬಡ್ಡಿ ಸಮೇತ ತುಂಬಲು ಆದೇಶಿಸಿರುವುದು ಕಂಡುಬರುತ್ತದೆ. ಈ ಯಾವುದೇ ದಾಖಲಾತಿಗಳ ಅಂಶಗಳನ್ನು ಅಪೀಲುದಾರರು ಸುಳ್ಳು ಎಂಬುದಾಗಿ ಅಲ್ಲಗೆಳೆದಿರುವುದಿಲ್ಲ. ಆದ್ದರಿಂದ ಒಂದನೇ ಎದುರುದಾರರು ನಿಯಮಾವಳಿಗಳನ್ನು ಪಾಲಿಸದೇ ಆದೇಶವನ್ನು ಹೊರಡಿಸಿದ್ದಾರೆ ಎಂದು ನುಡಿದಿರುವುದನ್ನು ಒಪ್ಪಲಾಗುವುದಿಲ್ಲ.

35) ಅಪೀಲುದಾರರು ವಾದವಿವಾದದ ಸಮಯದಲ್ಲಿ ಎರಡನೇ ಎದುರುದಾರರು ಪ್ರಶ್ನಿತ ಆದೇಶವನ್ನು ಹೊರಡಿಸುವಾಗ Annexure-G ಮತ್ತು Annexure-Lನಂತೆ ಇರುವ FORM-VAT-7 ದಾಖಲೆಗಳನ್ನು ಹಾಗೂ Annexure-Jನಂತೆ ಇರುವ ಬಾಡಿಗೆ ಕರಾರು ಪತ್ರವನ್ನು ಹಾಗೂ Annexure-Hನಂತೆ ಇರುವ BSNL Commercial Officer, ಹುಬ್ಬಳ್ಳಿ ರವರಿಗೆ ಬರೆದ ಪತ್ರವನ್ನು ಪರಿಶೀಲಿಸಿಲ್ಲವೆಂದು ನುಡಿದಿರುತ್ತಾರೆ. ಈ ದಾಖಲಾತಿಗಳನ್ನು ಪರಾಮರ್ಶಿಸಿದಾಗ 23.01.2013ರಂದು ಅಪೀಲುದಾರರ ಇಬ್ಬರು ಗಂಡು ಮಕ್ಕಳು (1) ಶ್ರೀ ಅನಿಲ್ ತಂದೆ ಶೇಷಿಮಾಲ್ ಜೈನ್ (2) ಶ್ರೀ ಸುನಿಲ್ ತಂದೆ ಶೇಷಿಮಾಲ್ ಜೈನ್‌ರವರು ಒಂದನೇ ಪಾರ್ಟಿಯಾಗಿಯೂ ಹಾಗೂ ಅಪೀಲುದಾರರು ಎರಡನೇ ಪಾರ್ಟಿಯಾಗಿಯೂ ಬಾಡಿಗೆ ಕರಾರು ಪತ್ರವನ್ನು ತಮ್ಮ-ತಮ್ಮ ನಡುವೆ ಮಾಡಿಕೊಂಡಿರುವುದು ಕಂಡುಬರುತ್ತದೆ. Annexure-Gಯನ್ನು (ದಿನಾಂಕ 25.09.2014) ಪರಿಶೀಲಿಸಿದಾಗ ಇದು VAT

ನೋಂದಣಿ ಪ್ರಮಾಣ ಪತ್ರವಾಗಿದ್ದು ಇದರ ಪ್ರಕಾರ ಧನಲಕ್ಷ್ಮೀ ಎಂಟರ್‌ಪ್ರೈಸಸ್‌ನ ಎಲ್ಲಾ ವ್ಯವಹಾರಗಳು CTS No. 4768, Shed B-88, MT Sagar Gokul Road, Hubballi ಇಲ್ಲಿ ದಿನಾಂಕ 01.07.2006ರಿಂದ ಚಾಲ್ತಿಯಲ್ಲಿರುವುದು ಕಂಡುಬರುತ್ತದೆ. Annexure-Lನ್ನು (ದಿನಾಂಕ 15.03.2012) ಪರಿಶೀಲನೆ ಮಾಡಿದಾಗ ಇದು VAT ನೋಂದಣಿ ಪ್ರಮಾಣ ಪತ್ರವಾಗಿದ್ದು ಇದರ ಪ್ರಕಾರ ಧನಲಕ್ಷ್ಮೀ ಎಂಟರ್‌ಪ್ರೈಸಸ್‌ನ ಎಲ್ಲಾ ವ್ಯವಹಾರಗಳು PB Road, New Gabbar, Hubballi ಇಲ್ಲಿ ದಿನಾಂಕ 01.07.2006ರಿಂದ ಚಾಲ್ತಿಯಲ್ಲಿರುವುದು ಕಂಡುಬರುತ್ತದೆ. ಅಪೀಲುದಾರರ ಪ್ರಕಾರ ಅವರು ನಡೆಸುವ Industrial Unitನ್ನು RGBRMP2858 ವಿದ್ಯುತ್ ಸ್ಥಾವರ ಸಂಖ್ಯೆಯಿಂದ RR No. MP1850 ಸ್ಥಾವರ ಇರುವ ಸ್ಥಳಕ್ಕೆ ಸ್ಥಳಾಂತರಗೊಳಿಸಲಾಗಿದೆ ಎಂಬುದಾಗಿದೆ. ಆದರೇ ಇವರು ಹಾಜರು ಪಡಿಸಿರುವ ಮೇಲೆ ವಿವರಿಸಲಾದ 3 ದಾಖಲೆಗಳಲ್ಲಿಯೂ ಈ ರೀತಿ ಸ್ಥಳಾಂತರಗೊಂಡ ಬಗ್ಗೆ ಯಾವುದೇ ಮಾಹಿತಿ ಸಿಗುವುದಿಲ್ಲ. Annexure-Hನ್ನು ಪರಿಶೀಲನೆ ಮಾಡಿದಾಗ ಇದೊಂದು Xerox ನಕಲಾಗಿದ್ದು ಯಾವುದೇ ದಿನಾಂಕವು ನಮೂದಾಗಿರುವುದಿಲ್ಲ ಆದರೇ ದಿನಾಂಕ 12.04.2013 ಎಂಬುದಾಗಿ ತದನಂತರ ಪೆನ್ನಿನಲ್ಲಿ ಬರೆದಿರುವುದು ಕಂಡುಬರುತ್ತದೆ. ಇದರ ಪ್ರಕಾರ ಅಪೀಲುದಾರರು ತಮ್ಮ Firmನ್ನು New Gabbar, ಹುಬ್ಬಳ್ಳಿ ಸ್ಥಳದಿಂದ ಗೋಕುಲ್ ರಸ್ತೆ ಹುಬ್ಬಳ್ಳಿ ಸ್ಥಳಕ್ಕೆ shifting ಆಗುತ್ತಿರುವ ಕಾರಣ ಈ ಹಿಂದೆ ಇದ್ದ Telephone ಸಂಖ್ಯೆಯನ್ನೇ ಉಳಿಸಿ ದೂರವಾಣಿಯನ್ನು ಮಾತ್ರ ಬದಲಾಯಿಸಿ ಕೊಡಲು ಕೋರಿಕೊಂಡಿರುವುದು ಕಂಡುಬರುತ್ತದೆ. ಆದರೆ ಈ ಮೇಲೆ ಹೇಳಿದ ಯಾವುದೇ ದಾಖಲಾತಿಗಳು ಒಂದನೇ ಪ್ರತಿವಾದಿಯ ಕಂಪನಿಗೆ ಸಂಬಂಧಿಸಿದ್ದು ಆಗಿರುವುದಿಲ್ಲ. ಅಷ್ಟೇ ಅಲ್ಲದೇ ಅಪೀಲುದಾರರು

ತಮ್ಮ ಅಪೀಲಿನಲ್ಲಿ ಆಗಲೀ ಅಥವಾ ವಾದವಿವಾದದ ಸಮಯದಲ್ಲಿ ಆಗಲಿ ತಮ್ಮ Industrial Unit ಅನ್ನು ಸ್ಥಳಾಂತರ ಮಾಡುತ್ತಿರುವ ಬಗ್ಗೆ ಒಂದನೇ ಎದುರುದಾರ ಕಂಪನಿಗೆ ಮಾಹಿತಿ ಕೊಟ್ಟಿದ್ದೆವು ಎಂಬಂತಹ ಯಾವುದೇ ದಾಖಲೆಯನ್ನು ಈ ಪ್ರಾಧಿಕಾರದ ಮುಂದೆ ಹಾಜರು ಪಡಿಸಿಲ್ಲ. ಹಾಗೂ RR No. RGBRMP2858 ಸ್ಥಾವರದ ನಿಲುಗಡೆಗಾಗಲಿ ಅಥವಾ ಸದರಿ ಸ್ಥಾವರವನ್ನು Industrial Unitಗಾಗಿ ಬಳಸುತ್ತಿಲ್ಲ ಎಂಬಂತಹ ಮಾಹಿತಿಯನ್ನು ಒಂದನೇ ಎದುರುದಾರ ಕಂಪನಿಗೆ ಕೊಟ್ಟಿದ್ದೆವೆಂದು ತೋರಿಸುವಂತಹ ದಾಖಲೆಯನ್ನು ಹಾಜರುಪಡಿಸಿಲ್ಲ. ಅಂದರೆ 2013ರ ಸಾಲಿನಿಂದ 18.07.2017ರವರೆಗೆ (Annexure-F) ಈ ಸ್ಥಾವರಕ್ಕೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ನೀಡಿರುವುದು ಕಂಡುಬರುವುದಿಲ್ಲ. ದಿನಾಂಕ 18.07.2017ರಂದು ಅರ್ಜಿದಾರರು M/s S.J. Jain Paper Bag Manufacturing Company, New Gabbar, ಹುಬ್ಬಳ್ಳಿಯ ಪರವಾಗಿ ಪತ್ರ ಬರೆಯುತ್ತಿದ್ದೇವೆ ಎಂದು ನುಡಿದು RGBRMP2858 ಸಂಖ್ಯೆಯ ಮಾಪಕವು ಸುಟ್ಟು ಹೋಗಿರುವ ಕಾರಣ ಬದಲಾಯಿಸಿಕೊಡುವಂತೆ CSD-II, AEE (Ele) ರವರಿಗೆ ಕೋರಿರುವುದು ಕಂಡುಬರುತ್ತದೆ. ಇಷ್ಟೇ ಹೊರತು ತಮ್ಮ ಪ್ರಕರಣಕ್ಕೆ ಪುಷ್ಟಿಯಾಗುವಂತಹ ಯಾವುದೇ ಸಾಕ್ಷ್ಯವನ್ನು ಅಪೀಲುದಾರರು ಹಾಜರುಪಡಿಸಿರುವುದಿಲ್ಲ.

36) ಉಳಿದ ದಾಖಲೆಗಳಾದ Annexure-Kಯನ್ನು ಪರಿಶೀಲನೆ ಮಾಡಿದಾಗ ಇದು ದಿನಾಂಕ 12.10.2012ರಂದು ಹೆಸ್ಕಾಂ ರವರು ನೀಡಿದ ಅಧಿಕೃತ ಜ್ಞಾಪನ ಪತ್ರವಾಗಿದ್ದು ಸ್ಥಾವರ ಸಂಖ್ಯೆ MP1850ರ ಗ್ರಾಹಕರಾದ S.B. Madiman ರವರ ಹೆಸರಿಂದ Anil Sheshamal Jain ಎನ್ನುವ ಹೆಸರಿಗೆ ಬದಲಾವಣೆಯಾಗಿರುವುದ ಕಂಡುಬರುತ್ತದೆ. Annexure-I ಪರಿಶೀಲನೆ ಮಾಡಿದಾಗ 28.01.2013ರಂದು

MP1850 ವಿದ್ಯುತ್ ಸ್ಥಾವರಕ್ಕೆ ಸಂಬಂಧಿಸಿದಂತೆ Anil Sheshamal Jain ರವರಿಗೆ 65 HP DBT ವಿದ್ಯುತ್ ಭಾರವನ್ನು ಹೆಸ್ಕಾಂ ರವರು ಮಂಜೂರು ಮಾಡಿರುವುದು ಕಂಡುಬರುತ್ತದೆ. ದಿನಾಂಕ 23.10.2021ರ ದಾಖಲೆ ಪರಿಶೀಲನೆ ಮಾಡಿದಾಗ RR No. MP1850 ವಿದ್ಯುತ್ ಸ್ಥಾವರವು ಶಾಶ್ವತ ನಿಲುಗಡೆ (Permanently Disconnected) ಎಂಬುದಾಗಿ ಕಂಡುಬರುತ್ತದೆ. ಆದರೇ ಪ್ರಸ್ತುತ ಪ್ರಕರಣದಲ್ಲಿ ಇರುವ ವಿವಾದವು MP1850 ವಿದ್ಯುತ್ ಸ್ಥಾವರಕ್ಕೆ ಸಂಬಂಧಪಟ್ಟದ್ದು ಆಗಿರುವುದಿಲ್ಲ. ಆದ್ದರಿಂದ ಈ ದಾಖಲಾತಿಗಳ ಬಗ್ಗೆ ಹೆಚ್ಚಿನ ಚರ್ಚೆ ಮಾಡಿರುವುದಿಲ್ಲ.

37) ಈ ರೀತಿಯಾಗಿ ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿದ ಎಲ್ಲಾ ದಾಖಲಾತಿ ಸಾಕ್ಷ್ಯಗಳನ್ನು ಕುಲಂಕುಶವಾಗಿ ಪರಿಶೀಲಿಸಿದಾಗ ಎರಡನೇ ಪ್ರತಿವಾದಿಯು ಪ್ರಶ್ನಿತ ಆದೇಶವನ್ನು ಹೊರಡಿಸುವ ಸಮಯದಲ್ಲಿ Conditions of Supply of Electricity of Distributions Licensees in the State of Karnatakaರಲ್ಲಿ ಅಡಕವಾದ ನಿಯಮಾವಳಿಗಳನ್ನು ಪಾಲಿಸಿಲ್ಲ ಎಂದು ನುಡಿಯಲು ಸಾಧ್ಯವಿಲ್ಲ. ಆದ್ದರಿಂದ ಎರಡನೇ ಪ್ರತಿವಾದಿಯು ಹೊರಡಿಸಿರುವ ಆದೇಶದಲ್ಲಿ ಈ ಪ್ರಾಧಿಕಾರದ ಹಸ್ತಕ್ಷೇಪ ಮಾಡುವ ಅಗತ್ಯ ಇರುವುದಿಲ್ಲ. ಆದ ಕಾರಣ ಎರಡನೇ ಎದುರುದಾರರ ಆದೇಶವು ನ್ಯಾಯೋಚಿತವಾಗಿದೆ ಎಂದು ಪರಿಗಣಿಸಿ ಒಂದನೇ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

38) **ಅಂಶ 2: -** ಈಗಾಗಲೇ ಈ ಮೇಲೆ ಅಂಶ 1ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

**ಸಂಖ್ಯೆ: OMB/H/G-431/2021/D-14** **ದಿನಾಂಕ: 15.02.2022**

# ಆದೇಶ

ಅಪೀಲನ್ನು ವಜಾಮಾಡಲಾಗಿದೆ.

ಪ್ರಕರಣ ಸಂಖ್ಯೆ: 254/2021, ಆದೇಶ ಸಂಖ್ಯೆ: ಅಇಂ(ವಿ)/ ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-254/2021/CYS-12ರಲ್ಲಿ ಎರಡನೇ ಪ್ರತಿವಾಧಿಯು ದಿನಾಂಕ 07.04.2021 ರಂದು ಮಾಡಿರುವ ಆದೇಶವನ್ನು ಸ್ಥಿರಗೊಳಿಸಲಾಗಿದೆ.

ಸಹಿ/-
(ಆರ್. ಶಾರದಾ)
ವಿದ್ಯಚ್ಛಕ್ತಿ ಲೋಕಪಾಲರು

**ಪ್ರತಿಯನ್ನು:**

1) ಶೇಷಮಾಲ್ ಜೆ. ಜೈನ್,
ಮೆ. ಧನಲಕ್ಷ್ಮಿ ಎಂಟರ್ ಪ್ರೈಸಸ್,
ಹಳೆ ಗಬ್ಬರು, ಪಿ.ಬಿ. ರಸ್ತೆ,
ಹುಬ್ಬಳ್ಳಿ.

2) ಶ್ರೀ ತುಷಾರ್ ಎಂ ಬದ್ದಿ
ಅರಿಹಂತ ಪಾರ್ಕ್,
ಕೇಶ್ವಾಪುರ,
ಹುಬ್ಬಳ್ಳಿ – 580023.

3) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ನಗರ ಉಪ ವಿಭಾಗ–2, ಹೆಸ್ಕಾಂ,
ನ್ಯೂ ಇಂಗ್ಲೀಷ್ ಸ್ಕೂಲ್ ಹಿಂಭಾಗ, ಪಿ.ಬಿ. ರಸ್ತೆ,
ಹುಬ್ಬಳ್ಳಿ – 580020.

4) ಶ್ರೀ ಹೆಚ್.ವಿ. ದೇವರಾಜ್, ವಕೀಲರು,
ನಂ. 39, ಶಾಪ್ ನಂ. 24,
ಮೆಜನೇನ್ ಫ್ಲೋರ್,
ಎ.ಎಸ್.ವಿ.ಎನ್.ವಿ. ಭವನ, ಕೆ.ಜಿ. ರಸ್ತೆ,
ಬೆಂಗಳೂರು-560009.

5) ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ,
ಶಿವಗಂಗಾ ಲೇಔಟ್, ಕೇಶ್ವಾಪುರ
ಹುಬ್ಬಳ್ಳಿ – 560023.

6) ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
7) ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
8) ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
9) ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.